**ಇಂದು ದಿನಾಂಕಃ 04-09-2024 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಆರೋಪಿತರ ಪರವಾಗಿ ಶ್ರೀ SNB ವಕೀಲರಿಂದಃ-**

ನನ್ನ ಮನೆ ಮತ್ತು 1ನೇ ಆರೋಪಿ ಮನೆ ಅಕ್ಕ ಪಕ್ಕದಲ್ಲಿದೆ. 1ನೇ ಆರೋಪಿ ಮನೆಯಲಿ ಯಾವುದೇ ಘಟನೆ ಆದರೆ ನಾನು ಹೋಗುತ್ತೇನೆ ಎಂದರೆ ಸರಿ. 1ನೇ ಆರೋಪಿಯ ತಾಯಿ ತಂದೆಗೆ ಅವನ ಒಬನೇ ಮಗ. 1ನೇ ಆರೋಪಿಯ ಮದುವೆ ಮಾತುಕತೆಗೆ ನಾನು ಹೋಗಿದೆ. ಸದರಿ ಮಾತುಕತೆಯಲ್ಲಿ ಯಾವುದಾದರೂ ವಸ್ತು ಕೊಡುವುದು ಅಥವಾ ತೆಗೆದುಕೊಳ್ಳುವುದು ಆಗಿಲ್ಲ. ಸದರಿ ಮದುವೆ 1ನೇ ಆರೋಪಿಯ ಖರ್ಚಿನಲ್ಲಿ ಆಗಿದೆ. ಮದುವೆ ಸಮಯಕ್ಕೆ 1ನೇ ಆರೋಪಿಗೆ ಯಾವುದಾದರೂ ವಸ್ತು ಕೊಟ್ಟಿದ್ದಾರಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮದುವೆಯಾಗಿ 1ನೆ ಆರೋಪಿ ಮತ್ತು ಅವನ ಹೆಂಡತಿ 1 ತಿಂಗಳ ಕಾಲ ಸರಿ ಇದ್ದರು. ಜಗಳ ಯಾರ ತಪ್ಪಿನಿಂದ ಆಗುತ್ತಿತ್ತು ಎಂದು ಪ್ರಶ್ನಿಸಿದಾಗ ಸಾಕ್ಷಿ 1ನೇ ಆರೋಪಿಯ ಹೆಂಡತಿ 1ನೇ ಆರೋಪಿಯ ತಾಯಿಗೆ ಹೊರಗೆ ಹಾಕಿ ನಾವು ಇರೋಣ ಎಂದು ಜಗಳ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. 1ನೇ ಆರೋಪಿಯ ಹೆಂಡತಿ ತಪ್ಪು ಮಾಡಿದಾಗ ನೀವು ಅವರಿಗೆ ಎಷ್ಟು ಬಾರಿ ತಿಳಿ ಹೇಳಿರುತ್ತೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ 2-3 ಬಾರಿ ತಿಳಿಸಿ ಹೇಳಿರುತ್ತೇವೆ ಎಂದು ನುಡಿಯುತ್ತಾರೆ. 1ನೇ ಆರೋಪಿ ಅಥವಾ ಅವರ ತಾಯಿ 1ನೇ ಆರೋಪಿ ಹೆಂಡತಿ ಜೊತೆ ಗಲಾಟೆ ಮಾಡುತ್ತಿದ್ದರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಆರೋಪಿತರು ಪ್ರಾಸಾ 3 ರವರಿಗೆ ವರದಕ್ಷಿಣೆ ನೀಡಲು ಕಿರುಕುಳ ನೀಡಿದ್ದಾರಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪೋಲಿಸರಿಗೆ ನೀವು ಹೇಳಿಕೆ ನೀಡಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪೋಲಿಸರು ನಿಮ್ಮ ಹೇಳಿಕೆಯಲ್ಲಿ ಏನು ಬರೆದುಕೊಂಡಿದ್ದಾರೆ ಎಂದು ನಿಮಗೆ ಗೊತ್ತಿದೆಯೇ ಎಂದು ಪ್ರಶ್ನಿಸಿದಾಗ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪ್ರಾಸಾ 3 ರವರು 1ನೆ ಆರೋಪಿಗೆ ನಿಮ್ಮ ತಾಯಿ ಬಿಟ್ಟು ನನ್ನ ಜೊತೆ ಇರದಿದ್ದರೆ ನಿಮ್ಮ ವಿರುದ್ದ ಸುಳ್ಳು ಪ್ರಕರಣ ದಾಖಲಿಸುತ್ತೇನೆ ಎಂದು ಬೆದರಿಕೆ ಹಾಕಿರುತ್ತಾಳೆ ಎಂದು ಸೂಚಿಸಿದಾಗ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈ ಪ್ರಕರಣ ಸಹ ಸುಳ್ಳು ಸೃಷ್ಟಿಸಿ ಪ್ರಾಸಾ 3 ರವರು ದಾಖಲಿಸಿದ್ದಾರೆ ಎಂದು ಸೂಚಿಸಿದಾಗ ಸಾಕ್ಷಿ ಸರಿ ಎಂದು ನುಡಿಯುತ್ತಾರೆ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಪ್ರಾಸಾ 3 ರವರು ಆರೋಪಿಗೆ ಸತಾಯಿಸಲು ಈ ಸುಳ್ಳು ಪ್ರಕರಣ ದಾಖಲಿಸಿದ್ದಾಳೆ ಎಂದು ಸೂಚಿಸಿದಾಗ ಸಾಕ್ಷಿ ಸರಿ ಎಂದು ನುಡಿಯುತ್ತಾರೆ.

ಪ್ರಾಸಾ 3 ರವರು 1ನೇ ಆರೋಪಿಗೆ ತಾಯಿಯ ಜೊತೆ ಇರಬೇಡ ಎಂದು ಹೇಳಿದ ಕಾರಣಕ್ಕೆ 1ನೇ ಆರೋಪಿ ಪ್ರಾಸಾ 3 ರವರ ಜೊತೆ ಸೇಡಂನಲ್ಲಿ 1 ವರ್ಷಗಳ ಕಾಲ ಪ್ರತ್ಯೇಕವಾಗಿ ವಾಸವಿದ್ದರು ಎಂದರೆ ಸರಿ.

1ನೇ ಆರೋಪಿ ತನ್ನ ತಾಯಿಗೆ ಆಸ್ಪತ್ರೆ ಖರ್ಚು ಮತ್ತು ಹಣ ನೀಡುತ್ತಿದ್ದ ಎಂದರೆ ಸರಿ. ಆಗ ಪ್ರಾ ಸಾ 3 ರವರು 1ನೇ ಆರೋಪಿಗೆ ನೀನು ನಿನ್ನ ತಾಯಿಗೆ ಯಾವುದೇ ಹಣ ನೀಡಬಾರದು ಮತ್ತು ಯಾವುದೇ ಸಂಪರ್ಕ ಇರಬಾರದು ಎಂದು ಕಿರುಕುಳ ನೀಡಿರುತ್ತಾಳೆ ಎಂದರೆ ಸರಿ. ಪ್ರಾ ಸಾ 3 ಮತ್ತು ಅವಳ ಕುಟುಂಬಸ್ಥರು ಆರೋಪಿತರಿಗೆ ಸತಾಯಿಸಲು ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**